02) ಬಂದಿದ್ದಲ್ಲಿ, ಅವಶ್ಯಕವಿರುವ ಶ್ರೀರಾಂಪುರ, ವಾಪಸಂದ್ರ, ಹಳೇಪೇರಸಂದ್ರ, ಕಂದವಾರ ಗ್ರಾಮಗಳಲ್ಲಿ ಪ್ರೌಢಶಾಲೆಗಳನ್ನು ತೆರೆಯಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ?

ಶ್ರೀ ಬಸವರಾಜ ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು) :

01) ಹೌದು.

02) 2007–08ನೇ ಸಾಲಿನಲ್ಲಿ 199 ಸರ್ಕಾರಿ ಪ್ರೌಢಶಾಲೆಗಳನ್ನು ಈಗಾಗಲೇ ಮಂಜೂರು ಮಾಡಲಾಗಿದೆ.

ಆಯವ್ಯಯದಲ್ಲಿ ಲಭ್ಯವಿರುವ ಅವಕಾಶದಂತೆ ಹಾಗೂ ಸ್ಥಳೀಯ ಅಗತ್ಯತೆಗಳನ್ನು ಪರಿಗಣಿಸಿ ಹಂತ ಹಂತವಾಗಿ ಸರ್ಕಾರಿ ಪ್ರೌಢಶಾಲೆಗಳನ್ನು ಮಂಜೂರು ಮಾಡುವ ಪ್ರಕ್ರಿಯೆ ನಡೆಯುತ್ತಿದೆ. ಇದೊಂದು ಸತತವಾದ ಪ್ರಕ್ರಿಯೆಯಾಗಿದೆ.

519 (1187) ಶ್ರೀಮತಿ ಭಾಗೀರಥಿ.ಟಿ. (ಕೊಟ್ಟೂರು) :– ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಳ್ಳಾರಿ ಜಿಲ್ಲೆ ಕೂಡ್ಲಿಗಿ ತಾಲ್ಲೂಕಿನಲ್ಲಿ ಪ್ರಧಾನ ಮಂತ್ರಿ ಗ್ರಾಮ್ ಸಡಕ್ ಯೋಜನೆಯಡಿಯಲ್ಲಿ ಕೈಗೆತ್ತಿಕೊಂಡಿರುವ ಕಾಮಗಾರಿಗಳ ಸಂಖ್ಯೆ ಎಷ್ಟು;

ಆ) ಈ ಕಾಮಗಾರಿಗಳು ಈಗ ಯಾವ ಹಂತದಲ್ಲಿವೆ ಹಾಗೂ ಇದಕ್ಕಾಗಿ ಬಿಡುಗಡೆಯಾದ ಅನುದಾನವೆಷ್ಟು;

ಇ) ಇತ್ತೀಚೆಗೆ ಸುರಿದ ಭಾರಿ ಮಳೆಯಿಂದಾಗಿ ಈ ರಸ್ತೆಗಳ ಕೆಲ ಭಾಗಗಳು ಹದಗೆಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ, ಈ ರಸ್ತೆಗಳ ಸುಧಾರಣೆಗಾಗಿ ಸರ್ಕಾರ ಯಾವ ಕ್ರಮವನ್ನು ಕೈಗೊಳ್ಳಲಾಗುವುದು?

ಶ್ರೀ ಸಿ.ಎಂ. ಉದಾಸಿ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :

ಅ) ಬಳ್ಳಾರಿ ಜಿಲ್ಲೆ ಕೂಡ್ಲಿಗಿ ತಾಲ್ಲೂಕಿನಲ್ಲಿ ಪ್ರಧಾನ ಮಂತ್ರಿ ಗ್ರಾಮ್ ಸಡಕ್ ಯೋಜನೆಯಡಿ ಎಂಟು ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ.

ಆ) ಕಾಮಗಾರಿಗಳ ಪ್ರಸ್ತುತ ಹಂತದ ಮತ್ತು ಅನುದಾನದ ವಿವರವನ್ನು ಅನುಬಂಧದಲ್ಲಿ ನೀಡಿದೆ.

ಇ) ಬಂದಿದೆ.

ಈ) ಸದರಿ ರಸ್ತೆಗಳ ದುರಸ್ತಿಯನ್ನು ಪ್ರಕೃತಿ ವಿಕೋಪ ಮಳೆಹಾನಿ ಯೋಜನೆಯಡಿಯ ಅನುದಾನದಡಿ ಕೈಗೊಳ್ಳಲು ಯೋಜಿಸಿದೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1187ಕ ಉತ್ತರದ ಲಗತ್ತು :

ಅನುಬಂಧ

ಕ್ರಸಂ	ಕಾಮಗಾರಿಯ ಹೆಸರು	ಹಂತ	ಕಾಮಗಾರಿಯ ಹಂತ	ಬಿಡುಗಡೆಯಾದ ಅನುದಾನ (ರೂ.ಲಕ್ಷಗಳಲ್ಲಿ)
1	ಕನ್ನಮಡಗು-ಕಲ್ಲಹಳ್ಳಿ	I	ಪೂರ್ಣಗೊಂಡಿದೆ	44.82
2	ಹೂಡೆಂ-ಕತ್ರಿಕೆಪಟ್ಟಿ	II	ಪೂರ್ಣಗೊಂಡಿದೆ	32.63
3	ಹುಮತಿ-ತಾಯಕ್ಕನಪಟ್ಟಿ	II	ಪೂರ್ಣಗೊಂಡಿದೆ	28.59
4	ಕೂಡ್ಲಿಗಿ-ಉಜ್ಜನಿ-KBM-MDR Cross	II	ಪೂರ್ಣಗೊಂಡಿದೆ	55.55
5	ಕೆಬಿಎಂ-ಮಾರಮ್ಮನಹಳ್ಳಿ	III	ಪೂರ್ಣಗೊಂಡಿದೆ	76.00
6	ಕೆಬಿಎಂ-ರಾಂಪುರ	IV	ಪೂರ್ಣಗೊಂಡಿದೆ	148.20
7	ಸಿರಸಿ-ಮೊಳಕಾಲ್ಮೂರು ರಸ್ತೆ	V-B-I	ಗ್ರೇಡ್-2 ಮೆಟಲಿಂಗ್ ಪೂರ್ಣಗೊಂಡಿದ್ದು, ಗ್ರೇಡ್ – 3 ಜಲ್ಲಿ ಸಂಗ್ರಹಣೆ ಪ್ರಗತಿಯಲ್ಲಿದೆ	141.50
8	ಕೊಟ್ಟೂರು ಬಣವಿಕಲ್ಲು ರಸ್ತೆ-ಅಗ್ರಹಾರ ಪಾಲಯ್ಯನಕೋಟೆ ರಸ್ತೆ	V-B-I	ಗ್ರೇಡ್-2 ಮೆಟಲಿಂಗ್ ಪೂರ್ಣಗೊಂಡಿದ್ದು, ಗ್ರೇಡ್ – 3 ಜಲ್ಲಿ ಸಂಗ್ರಹಣೆ ಪ್ರಗತಿಯಲ್ಲಿದೆ	168.90